ಅಧ್ಯಕ್ಷರು : ಹೇಗೆ ಮಾಹಿತಿ ಕೊಡುವುದಕ್ಕಾಗುತ್ತದೆ? How can he give? It is too much. ಬೇರೆ ರಾಜ್ಯದ ಮಾಹಿತಿಯನ್ನು ಹೇಗೆ ಕೊಡುವುದಕ್ಕಾಗುತ್ತದೆ?

ಶ್ರೀ ನೆ.ಲ. ನರೇಂದ್ರಬಾಬು : ಅಲ್ಲಿನ ಕನ್ನಡಿಗ ಮಕ್ಕಳಿಗೆ ಕನ್ನಡ ಮಾಧ್ಯಮ ಶಾಲೆ ಎಷ್ಟಿವೆ ಎಂದಷ್ಟೇ ನಾನು ಕೇಳಿದ್ದು. ಸರ್ಕಾರದಲ್ಲಿ ಅಷ್ಟೂ ಮಾಹಿತಿ ಕೊಡಲಿಕ್ಕೆ ಸಾಧ್ಯವಿಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ಮಾಹಿತಿ ಎಲ್ಲಾ ತರಿಸಿ ಕೊಡುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಸತ್ಯ, ಅಸತ್ಯ ಎನ್ನುವ ಬಗ್ಗೆ ಆಮೇಲೆ ಚರ್ಚೆ ಮಾಡೋಣ. ಆದರೆ, ಇದು ಗಂಭೀರವಾದ ವಿಷಯ ವಾಗಿರುವುದರಿಂದ ಎರಡು ರಾಜ್ಯಗಳ ಮಧ್ಯೆ ಸೌಹಾರ್ದಯುತವಾದ ಸಂಬಂಧಗಳು ಉಳಿಯಬೇಕಾದರೆ ತಾವು ತಮ್ಮ ಕಡೆಯಿಂದ ಯಾರಾದರೂ ಉನ್ನತ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಅಲ್ಲಿರುವ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು, Secretary ಯಾರಿದ್ದಾರೆ ಅವರ ಜೊತೆ ಮಾತನಾಡಿಕೊಂಡು ಅದನ್ನು ಪರಿಹಾರ ಮಾಡುವುದಕ್ಕೋಸ್ಕರ ನೀವು ಉತ್ತರ ಕೊಟ್ಟರೆ ಎಲ್ಲಾ ಸಮಾಧಾನವಾಗುತ್ತದೆ.

ಅಧ್ಯಕ್ಷರು : ಅಷ್ಟನ್ನು ಏಳಿದ್ದಾರೆ. ಅದಕ್ಕೆ ಆವೇಶಭರಿತವಾಗಿ ಮಾತನಾಡಿಬಿಟ್ಟರೆ ಕನ್ನಡ ಉಳಿದು ಹೋಗುತ್ತದೆಯೇ? No.

ಶ್ರೀ ನೆ.ಲ.ನರೇಂದ್ರಬಾಬು : ಗಡಿ ನಾಡಿನಲ್ಲಿ ಕನ್ನಡ ಶಾಲೆಗಳು ಎಷ್ಟಿವೆ? ಇದೇ ರೀತಿ ಅವರೂ ಪ್ರೋತ್ಸಾಹ ಕೊಡುತ್ತಿದ್ದಾರೆಯೇ? ಎನ್ನುವ ಮಾಹಿತಿ ತರಿಸಿ ಎಂದರೆ ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದು ಸಭೆಗೆ ಅಗೌರವವಲ್ಲವೇ? ಅಲ್ಲಿರುವ ಕನ್ನಡಿಗರಿಗೆ ಕನ್ನಡಕ್ಕೆ ಪ್ರೋತ್ಸಾಹ ಕೊಡುವುದಕ್ಕೆ ಮಾಹಿತಿ ಕೊಡಿ ಎಂದರೆ ಈ ರೀತಿ ಉತ್ತರ ಕೊಟ್ಟರೆ ಹೇಗೆ?

ಹುಣಸೂರು ವಿಧಾನಸಭಾ ಕ್ಷೇತ್ರದ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ ಸ್ಥಗಿತ

103 (302) ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನ ಕರಿಮುದ್ದನಹಳ್ಳಿ ಮತ್ತು ಹನಗೂಡು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ ಕಾಮಗಾರಿಗಳು ಪೂರ್ಣಗೊಳ್ಳದೇ ಮರದ ಕೆಳಗೆ ಪಾಠ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾದ ಅನುದಾನವೆಷ್ಟು; ಮತ್ತು ವರ್ಷ ಯಾವುದು;

ಇ) ಸದರಿ ಕಟ್ಟಡ ನಿರ್ಮಾಣ ಕಾಮಗಾರಿಗಳು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಇನ್ನೂ ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು;

ಈ) ಈ ಬಗ್ಗೆ ಸರಕಾರವು ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಮರದ ಕೆಳಗೆ ಪಾಠ ಮಾಡುತ್ತಿರುವುದಿಲ್ಲ.

ಆ)

ಕಾಮಗಾರಿಯ ಹೆಸರು	ಮಂಜೂರಾದ ಅನುದಾನ	ವರ್ಷ
ಸರ್ಕಾರಿ ಪ.ಪೂ. ಕಾಲೇಜು, ಕರಿಮುದ್ದನಹಳ್ಳಿ	50.00 ಲಕ್ಷ	2007–08
ಸರ್ಕಾರಿ ಪ.ಪೂ. ಕಾಲೇಜು ಹನಗೂಡು	45.00 ಲಕ್ಷ	2007–08

ಇ) ಈ ಎರಡೂ ಕಾಮಗಾರಿಗಳನ್ನು ಅಪೆಂಡಿಕ್ಸ್–ಇ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ. ಈ ಎರಡೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಾಕಿ ಬಿಲ್ಲುಗಳ ಮೊತ್ತವನ್ನು ಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ. ಸದರಿ ಕಾಮಗಾರಿಗಳನ್ನು ತಕ್ಷಣ ಪ್ರಾರಂಭಿಸುವಂತೆ, ಲೋಕೋಪಯೋಗಿ ಇಲಾಖೆ, ಹುಣಸೂರು ವಿಭಾಗದ ಕಛೇರಿಯಿಂದ ಸಂಬಂಧಿಸಿದ ಗುತ್ತಿಗೆದಾರರಿಗೆ ನೋಟೀಸ್ ನೀಡಲಾಗಿದೆ.

ಈ) ಅಪೆಂಡಿಕ್ಸ್–ಇ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.20.26 ಕೋಟಿಗಳ ಅವಶ್ಯಕತೆ ಇರುವುದರಿಂದ, ಅನುದಾನದ ಲಭ್ಯತೆಯನ್ನು ಆಧರಿಸಿ 2012–13ನೇ ಸಾಲಿಗೆ ಒದಗಿಸಲು ಕ್ರಮ ವಹಿಸಲಾಗುವುದು.

ಶ್ರೀ ಹೆಚ್.ಪಿ. ಮಂಜುನಾಥ್ : ಇದೇ ಉತ್ತರ ನನಗೆ ಕಳೆದ ಮೂರು ವರ್ಷಗಳಿಂದ ಬರುತ್ತಿದೆ, ಇದೇನೂ ಹೊಸದಲ್ಲ. ನಾನು ಕಳೆದ ಮೂರು ಸಲವೂ ಪ್ರಶ್ನೆ ಕೇಳಿದ್ದೇನೆ. ಕಳೆದ ಮೂರು ಸಲವೂ ಒಂದೇ ಉತ್ತರವಿದೆ. ಆ ಮೂರು ಕಾಫಿಗಳೂ ನನ್ನ ಹತ್ತಿರವಿವೆ. ಸರ್ಕಾರ ಇದರ zerox copy ಇಟ್ಟುಕೊಂಡಿದೆಯೇ? ಏಕೆಂದರೆ, ನಾನು ಮೂರು ಸಲ ಪ್ರಶ್ನೆ ಕೇಳಿದಾಗಲೂ ಒಂದೇ ಉತ್ತರ ಕೊಟ್ಟಿದ್ದಾರೆ. ಪ್ರತಿ ಸಲ ಒಂದೇ ಒಂದು change ಎಂದರೆ 2008ರ ವರ್ಷದಲ್ಲಿ ಕೇಳಿದಾಗ 2009–10ರಲ್ಲಿ ಅನುದಾನ ಕೊಡುತ್ತೇವೆಂದು ಹೇಳಿದ್ದಾರೆ. 2009ರಲ್ಲಿ ಪ್ರಶ್ನೆ ಕೇಳಿದಾಗ 2010–11ರಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಈಗ ಪ್ರಶ್ನೆ ಕೇಳಿದ್ದಕ್ಕೆ 2012–13ರಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಈ ಸರ್ಕಾರಕ್ಕೆ ಶಿಕ್ಷಕರ ಬಗ್ಗೆಯಾಗಲಿ, ವಿದ್ಯಾರ್ಥಿಗಳ ಬಗ್ಗೆಯಾಗಲಿ ಬಹಳ ಕಾಳಜಿ ಇದೆ. ಬಹಳ ವಿಚಿತ್ರವೆಂದರೆ, ಮಕ್ಕಳಿಗೆ ಮರದ ಕೆಳಗಡೆ ಪಾಠ ಮಾಡುತ್ತಿದ್ದಾರೆಯೇ ಎಂಬುದನ್ನು ಕೇಳಿದ್ದೇನೆ. ಪ್ರಶ್ನೆ(ಅ)ಕ್ಕೆ ಸಂಬಂಧಿಸಿದಂತೆ ಮರದ ಕೆಳಗಡೆ ಪಾಠ ಮಾಡುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅದೂ ಕೂಡ ಪತ್ರಿಕೆಯಲ್ಲಿ with photo ಬಂದಿದೆ. ಏಕೆ ನಿಮ್ಮ ಯಾವ ಅಧಿಕಾರಿಗಳು ತಪ್ಪು ಮಾಹಿತಿ ಕಳುಹಿಸುತ್ತಾರೆ? ಪತ್ರಿಕೆಯಲ್ಲಿ ಬಂದಿರುವುದನ್ನು ಬೇಕಾದರೆ ನಿಮಗೆ ಕಳುಹಿಸಿಕೊಡುತ್ತೇನೆ. ಆ ಶಾಲೆಗೆ ಆಗಬೇಕಾಗಿರುವ ಬಗ್ಗೆ ನನ್ನ ಸಲಹೆ ಏನೆಂದರೆ, ಪದವಿಪೂರ್ವ ಮಂಡಳಿಯಿಂದ 4202 ಶೀರ್ಷಿಕೆಯಡಿಯಲ್ಲಿ ಏನು PWD ಗೆ ಕೊಡುತ್ತಾರೆ, ಅದನ್ನು ಪ್ರತಿವರ್ಷ ಕೂಡ extend ಮಾಡಿಕೊಂಡು ಹೋಗುತ್ತಿದ್ದಾರೆ. ಸರ್ಕಾರ 50 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿದರೂ ಸಹ ಅದು ಜನರಿಗೆ, ವಿದ್ಯಾರ್ಥಿಗಳ ಭವಿಷ್ಯಕ್ಕೆ ಉಪಯೋಗವಾಗುತ್ತಿಲ್ಲ. ಅರ್ಧ ಕೋಟಿ ರೂಪಾಯಿಗಳಷ್ಟು ಹಣವನ್ನು ಪೂರ್ಣಗೊಳಿಸಬೇಕಾದರೆ, ಮಕ್ಕಳ ಭವಿಷ್ಯವನ್ನು ಉಜ್ಜಲಗೊಳಿಸಬೇಕಾದರೆ ದಯವಿಟ್ಟು ಇದೇ ಸದನದಲ್ಲಿ ಮತ್ತೆ 2012–13 ಎಂದು ಹೇಳುವುದು ಬೇಡ, ಕೇವಲ 40 ಲಕ್ಷ ರೂಪಾಯಿಗಳನ್ನು

ಕೊಟ್ಟರೆ ಅಲ್ಲಿರುವ ವಿದ್ಯಾರ್ಥಿಗಳೆಲ್ಲ ಭವಿಷ್ಯದಲ್ಲಿ ನಿಜವಾಗಿಯೂ ನಿಮ್ಮ ಸರ್ಕಾರವನ್ನು ನೆನೆಸಿಕೊಳ್ಳುತ್ತಾರೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶ್ರೀಯುತ ಮಂಜುನಾಥ್‌ರವರು ಹುಣಸೂರು ತಾಲ್ಲೂಕಿನ ಕರಿಮುದ್ದನಹಳ್ಳಿ ಮತ್ತು ಹನಗೂಡು ಪದವಿಪೂರ್ವ ಕಾಲೇಜಿನ ಕಟ್ಟಡದ ವಿಷಯಗಳಲ್ಲಿ ತೊಂದರೆಯಾಗುತ್ತಿದೆ ಎಂದು ಪ್ರಸ್ತಾಪಿಸಿದ್ದಾರೆ. ಈ ಎರಡೂ ಕಟ್ಟಡಗಳಿಗೆ 2007–08 ರಿಂದಲೂ ನಾವು ಹಣವನ್ನು ಕೊಡುತ್ತಾ ಬಂದಿದ್ದೇವೆ. ಮಾನ್ಯ ಮಂಜುನಾಥ್‌ರವರೆ ಇಲ್ಲಿ ಎರಡು ವಿಷಯಗಳಿದ್ದು, ಅದನ್ನು ನಾನು ಇಲ್ಲಿ ಉಲ್ಲೇಖ ಮಾಡಬಯಸುತ್ತೇನೆ. ಕೊಟ್ಟ ಹಣ ಪೂರ್ಣ ಖರ್ಚಾಗದೇ, ಕೆಲಸ ಸಮರ್ಪಕವಾಗದೇ ಉಳಿದಿದೆ. ಎರಡನೆಯದಾಗಿ, ಇನ್ನೂ ಹೆಚ್ಚುವರಿ ಹಣ ಬೇಕಾಗಿದೆ ಎನ್ನುವುಂಥದ್ದು. Appendix-E ನಲ್ಲಿ ಅದಕ್ಕೆ ಹಿಂದೆ ಒಂದು ಸಲ ನಮ್ಮ ಸರ್ಕಾರ ಬರುವ ಮೊದಲು ಬಜೆಟ್‌ನಲ್ಲಿ 20 ಕೋಟಿ ರೂಪಾಯಿಗಳನ್ನು ಇಟ್ಟು, 80 ಕೋಟಿ ರೂಪಾಯಿಗಳ ಕ್ರಿಯಾಯೋಜನೆಯನ್ನು ಮಾಡಿ ಮಂಜೂರು ಮಾಡಿದ್ದರು. ಬಹುಶಃ ಅದು 2007–08ರಲ್ಲಿರಬಹುದು.

ಶ್ರೀ ಹೆಚ್.ಡಿ. ರೇವಣ್ಣ : ಆಗ ಏನಿತ್ತು ಅದರಂತೆ ಮಾಡಿದ್ದೆವು. ಬೇಕಾದರೆ ಲೋಕೋಪಯೋಗಿ ಸಚಿವರನ್ನು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ಅದೇ ಮುಂದುವರಿದಿರುವುದು. ಆ 20 ಕೋಟಿ ರೂಪಾಯಿಗಳೇ ಇನ್ನೂ ನಮಗೆ ಬರಬೇಕಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ : ಈಗ 1/3rd grant ಇಟ್ಟಿದ್ದಾರೆ. ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆಗ budget provision ಇರಲಿಲ್ಲ. ಅದಕ್ಕೆ ಈಗ ನಾವು ಹಣಕಾಸು ಇಲಾಖೆಯ ಜೊತೆ ಸಮಾಲೋಚನೆ ಮಾಡುತ್ತಿದ್ದೇವೆ. ಅವರ ಜೊತೆ ಚರ್ಚೆ ಮಾಡಿದ್ದೇವೆ. ಅವರು ನಮಗೆ 40 ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಮಗೆ ಇನ್ನೂ 20 ಕೋಟಿ 26 ಲಕ್ಷ ರೂಪಾಯಿಗಳ ಅಗತ್ಯವಿದೆ.

ಶ್ರೀ ಹೆಚ್.ಪಿ. ಮಂಜುನಾಥ್ : ಕೇವಲ 40 ಲಕ್ಷ ರೂಪಾಯಿಗಳು ಸಾರ್. ಕೋಟಿ ರೂಪಾಯಿಗಳನ್ನು ಕೊಟ್ಟರೆ ಅಲ್ಲಿ ಬೇಕಾದಷ್ಟು ಕಟ್ಟಡ ಕಟ್ಟಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ಹಣವನ್ನು ಆದಷ್ಟು ಬೇಗ ತೆಗೆದುಕೊಂಡು ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಮಧುಗಿರಿ ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರಿನ ಯೋಜನೆ

1028 ಶ್ರೀಮತಿ ಅನಿತಾ ಕುಮಾರಸ್ವಾಮಿ (ಮಧುಗಿರಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕ್ಷೇತ್ರಕ್ಕೆ ಶಾಶ್ವತ ಶುದ್ಧ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ (ಮಾಹಿತಿ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಸ್ಥೂಕ್ತ ಜಲಮೂಲ ಲಭ್ಯವಾದಲ್ಲಿ ಅರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವ ಅಧರಿಸಿ ಶಾಶ್ವತ ಕುಡಿಯುವ ನೀರಿನ ಯೋಜನೆಗಳನ್ನು ಒದಗಿಸಲು ಸರ್ಕಾರ ಸಿದ್ಧವಿದೆ. ಪರ್ಯಾಯವಾಗಿ ಸಮಸ್ಯಾತ್ಮಕ ಗ್ರಾಮಗಳಲ್ಲಿ ಮಳೆ ನೀರು ಕೊಯ್ಲು, ಡೀ–ಫ್ಲೋರಿಡೆಶನ್ ಘಟಕಗಳನ್ನು ಒದಗಿಸುವಂತಹ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದಲ್ಲದೆ, 13ನೇ ಹಣಕಾಸು ಆಯೋಗದಡಿ 21 DF ಘಟಕಗಳನ್ನು ಅಳವಡಿಸಲು ಪ್ರಸ್ತಾಪಿಸಲಾಗಿದೆ.

ಶ್ರೀ ಸಿ.ಬಿ. ಸುರೇಶ್ ಬಾಬು (ಶ್ರೀಮತಿ ಅನಿತಾ ಕುಮಾರಸ್ವಾಮಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಧುಗಿರಿ ತಾಲ್ಲೂಕಿನ ಸಾಕಷ್ಟು ಹಳ್ಳಿಗಳಲ್ಲಿ fluoride ಅಂಶವಿರುವುದರಿಂದ ನೀರನ್ನು ಕುಡಿದು ಅಲ್ಲಿನ ಸಾಕಷ್ಟು ಜನರ ಆರೋಗ್ಯ ಹಾಳಾಗಿರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಅದರ ಬಗ್ಗೆ ಶಾಶ್ವತವಾಗಿ ಏನಾದರೊಂದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಅದಕ್ಕೇನು ಕ್ರಮ ತೆಗೆದುಕೊಂಡಿದ್ದಾರೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.